<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿಃ ಶ್ರೀ ಬಿ ಎಂ ಎ ವಕೀಲರಿಂದಃ</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಅಪಘಾತಕ್ಕೆ ಒಳಗಾದ ವಾಹನದ ವಿಮಾ ಪಾಲಿಸಿಯ ದೃಡಿಕೃತಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದು ನಿಶಾನೆ ಆರ್ 1 ಆಗಿದೆ. ವಾಹನ ಚಾಲಕನಿಗೆ ಅಪಘಾತ ಸಂದರ್ಬದಲ್ಲಿ ನಾನು ಟ್ರಾನ್ಸ್ ಪೋರ್ಟು ವಾಹನದ ವಾಹನ ಚಾಲನಾ ಪರವಾನಿಗೆ ಮಾತ್ರ ಇದ್ದು ಪ್ಯಾಸೆಂಜರ್ ವಾಹನ ಚಾಲನೆಯ ಬ್ಯಾಡ್ಜ್ ಇಲ್ಲದ ಕಾರಣ ನಮ್ಮ ವಿರುದ್ದ ಅರ್ಜಿಯನ್ನು ವಜಾಗೊಳಿಸಬೇಕಾಗಿ ಪ್ರಾರ್ಥನೆ.

<u>ಪಾಟೀ ಸವಾಲು ಶ್ರೀ ಜಿ ಜಿ ವಕೀಲರಿಂದ ಅರ್ಜಿದಾರರ ಪರವಾಗಿ ಃ</u>

ಈ ಅರ್ಜಿಗೆ ಸಂಬಂದಿಸಿದಂತೆ ನಾವು ನಮ್ಮ ಕಂಪನಿಯಿಂದ ಪ್ರತ್ಯೇಕವಾಗಿ ತನಿಖೆಯೆನು ಮಾಡಿಲ್ಲ. ಅಪಘಾತ ಸಂದರ್ಬದಲ್ಲಿ ಅರ್ಜಿದಾರನೆ ಸದರಿ ವಾಹನದ ಚಾಲಕ ಎಂದು ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆಂದರೆ ಸರಿ. ಸದರಿ ದೋಷರೋಪಣ ಪಟ್ಟಿಯಲ್ಲಿ ಚಾಲಕನಿಗೆ ಚಾಲನಾ ಪರವಾನಿಗೆ ಇರಲ್ಲಿಲ ಎಂದೆನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ 10 ರ ಪ್ರಕಾರ ಚಾಲಕನಿಗೆ ಅಂದರೆ

ಅರ್ಜಿದಾರನಿಗೆ ನಾನ್ ಟ್ರಾನ್ಸ್‌ಪೋರ್ಟ್ ತ್ರಿ ವಿಲ್ಲರ್ ವಾಹನಗಳನ್ನು ಮಾತ್ರ ಚಾಲನೆ ಮಾಡಲು ಪರವಾನಿಗೆ ಇದೆ ಎಂದರೆ ಸರಿ. ನಾನು ಸ್ವತಃ ಹೇಳುವುದೇನೆಂದರೆ ಪ್ಯಾಸೆಂಜರ್ ವಾಹನ ಚಾಲನೆ ಮಾಡುವಂತಿಲ್ಲ.

ಅರ್ಜಿದಾರನಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ ಎಂದರೆ ಸರಿ. ಅರಜಿದಾರನಿಗೆ ಚಾಲನಾ ಪರವಾನಿಗೆ ಇರುವುದರಿಂದ ಪರಿಹಾರ ನೀಡಲು ನಾವೇ ಬಾಧ್ಯಸ್ತ ರಿರುತ್ತೇವೆ ಎಂದರೆ ಸರಿಯಲ್ಲ. ಪರಿಹಾರ ನೀಡಲು ನಾವು ಬಾಧ್ಯಸ್ತರಲ್ಲ ಎಂದು ನಾವು ಸುಳ್ಳು ಸಾದನೆಯನ್ನು ಮಾಡುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.